ಯಕಗಳು ಹಾಗೂ ಇತರೇ ವಿಧೇಯಕಗಳನ್ನು ದಿನಾಂಕ 13ನೇ ಆಗಸ್ಟ್ ಹಾಗೂ 14ನೇ ಆಗಸ್ಟ್ 1996ರಂದು ತೆಗೆದುಕೊಳ್ಳಲಾಗುವುದು. ಈ ವರದಿಗೆ ಸದನವು ಒಪ್ಪಿಗೆ ನೀಡುತ್ತದೆಂದು ಭಾವಿಸುತ್ತೇನೆ. ಈಗ ಬೇಡಿಕೆಗಳ ಮೇಲಿನ ಉತ್ತರ.

6.20 ಪಿ.ಎಂ.

ಶ್ರೀ ಜೆ.ಹೆಚ್. ಪಟೇಲ್:- ಸದನದಲ್ಲಿ ನಡೆಯುವ ವಿಷಯಗಳು ರೆಕಾರ್ಡ್‌ಗೆ ಹೋಗಬೇಕಾಗುತ್ತದೆ.

ಅಧ್ಯಕ್ಷರು:- ಮಾನ್ಯ ಪುಟ್ಟಣ್ಣಯ್ಯನವರೇ, ಸ್ವಲ್ಪ ಯೋಚನೆ ಮಾಡಿ, ಸಭಾ ನಾಯಕರು ಮುಖ್ಯಮಂತ್ರಿಯಾದ ಮೇಲೆ ಮೊದಲನೆ ಬಾರಿಗೆ ಅವರಿಗೆ ಸಂಬಂಧಪಟ್ಟ ಬೇಡಿಕೆ ಮೇಲೆ ಉತ್ತರ ಕೊಡಲು ನಿಂತಿದ್ದಾರೆ. ಎಲ್ಲಾ ವಿಚಾರಗಳನ್ನು ಸಾಕಷ್ಟು ಸುದೀರ್ಘವಾಗಿ ಈ ಸದನದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಕೆಲವು ವಿಚಾರಗಳಲ್ಲಿ ಅಭಿಪ್ರಾಯ ಭೇದ ಬರತಕ್ಕಂಥಾದ್ದು ಸಹಜ. ಅವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ತಾವುಗಳು ಧರಣಿ ಮಾಡತಕ್ಕಂಥ ತೀವ್ರವಾದ ಸನ್ನಿವೇಶ ಏನೂ ಬಂದಿಲ್ಲ. ಸೌಜನ್ಯದ ದೃಷ್ಟಿಯಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ದಯ ಮಾಡಿ ತಾವು ಸಹಕರಿಸಬೇಕು.

ಶ್ರೀ ವಾಟಾಳ್ ನಾಗರಾಜ್:- ಆಯಿತು, ನಾವು ಸಭಾತ್ಯಾಗ ಮಾಡುತ್ತೇವೆ.

(ಮಾನ್ಯ ವಾಟಾಳ್ ನಾಗರಾಜ್‌ರವರು, ಕೆ.ಸಿ.ಪಿ. ಪಕ್ಷದ ಸದಸ್ಯರುಗಳು, ಹಾಗೂ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು:- ಮಾನ್ಯ ಸದಸ್ಯರುಗಳಾದ ಶ್ರೀ ಪ್ರತಾಪ ಚಂದ್ರ ಶೆಟ್ಟಿ ಮತ್ತು ರಮಾನಾಥ ರೈ ಅವರ ಒಂದು ಗಮನ ಸೆಳೆಯುವ ಸೂಚನೆ ನಿನ್ನೆ ದಿವಸವೇ ಕೈ ಬಿಟ್ಟು ಹೋಗಿತ್ತು. ಇವತ್ತು ಅದನ್ನು ಹಾಕಲಾಗಿದೆ. ಅದನ್ನು ಮುಗಿಸಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿ.

6. ಗಮನ ಸೆಳೆಯುವ ಸೂಚನೆಗಳು

ವಿಷಯ:- ಆಶ್ರಯ ಅಂಬೇಡ್ಕರ್ ಹಾಗೂ ನೆರಳಿನ ಭಾಗ್ಯ ಯೋಜನೆಗಳ ಫಲಾನುಭವಿಗಳ ಆಯ್ಕೆ.

ಶ್ರೀ ಬಿ. ರಮಾನಾಥ ರೈ:- ಮಾನ್ಯ ಅಧ್ಯಕ್ಷರೆ, ಆಶ್ರಯ, ಅಂಬೇಡ್ಕರ್, ನೆರಳಿನ ಭಾಗ್ಯ ಯೋಜನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ತಾಲ್ಲೂಕು ಪಂಚಾಯಿತಿ ಸಮಿತಿಗಳು ಸರ್ಕಾರದ ಮಾರ್ಗಸೂಚಿಯನ್ನು ಅನುಸರಿಸದಿರುವ ಬಗ್ಗೆ ಮಾನ್ಯ ವಸತಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.